**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**<u>C.C. No.507/2025</u>**

**CW- 1** **PW:5**

| | |
|---|---|
| ಸಾಕ್ಷಿಯ ಹೆಸರು | ಃ ರಾಘವೇಂದ್ರ ರಾಮದುರ್ಗ |
| ತಂದೆ /ಗಂಡನ ಹೆಸರು | ಃ ತಿಪ್ಪಣ್ಣ |
| ವಯಸ್ಸು | ಃ 43 ವರ್ಷ |
| ಉದ್ಯೋಗ | ಃ ಮುಖ್ಯಪೇದೆ ನವನಗರ |
| ವಾಸಸ್ಥಳ | ಃ ಹುಬ್ಬಳ್ಳಿ |

ದಿಃ **17.07.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಕಳೆದ 3 ವರ್ಷಗಳಿಂದ ಎ ಪಿ ಎಂ ಸಿ ನವನಗರ ಪೋಲಿಸ್ ಠಾಣೆಯಲ್ಲಿ ಅಪರಾಧ ವಿಬಾಗದಲ್ಲಿ ಪೊಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 28.07.2024 ರಂದು ಮಾನ್ಯ ಪೊಲಿಸ್ ಆಯುಕ್ತರು ಹುಬ್ಬಳ್ಳಿ ದಾರವಾಡ ಇವರು ನಿಷೇದಿತ ಮಾದಕ ವಸ್ತು ಮತ್ತು ದ್ರವಗಳನ್ನು ಸೇವನೆ ಮಾಡುವವರ ವಿರುದ್ದ ಕಾನೂನಿನ ಅಡಿಯಲ್ಲಿ ಕ್ರಮ ಜರುಗಿಸಲು ಆದೇಶಿಸಿದ್ದರಿಂದ ನಮ್ಮ ಪೊಲಿಸ್ ಠಾಣೆ ಇನ್ಸಪೆಕ್ಟರ ರವರು ನಮ್ಮ ಠಾಣಾ ವ್ಯಾಪ್ತಿಯಲ್ಲಿ ನಿಷೇದಿತ ಮಾದಕ ವಸ್ತು ಮತ್ತು ಸೇವನೆ ಪತ್ತೆ ಮಾಡಿ ಠಾಣೆಗೆ ಕರೆತರಲು ಸೂಚಿಸಿದ ಮೇರೆಗೆ ನಾನು ಮತ್ತು ನನ್ನ ಸಿಬ್ಬಂದಿಯವರಾದ ಚಾಸಾಃ 6 ರಿಂದ 9 ರವರು ಸೇರಿ ನಮ್ಮ ನಮ್ಮ ದ್ವಿಚಕ್ರ ವಾಹನದಲ್ಲಿ ಆ ದಿವಸ ಬೆಳಿಗ್ಗೆ 9.45 ಕ್ಕೆ ಪೆಟ್ರೋಲಿಂಗ ಕರ್ತವ್ಯಕ್ಕೆ ಹೊರಟೆವು. ನಮ್ಮ ಠಾಣೆಯ ವ್ಯಾಪ್ತಿಯಲ್ಲಿ ಬರುವ ನವನಗರದ ಅಧ್ಯಾಪಕ ನಗರ ಪಾನವಿಲ್ಲಾ ಶಾಪ್ ಹತ್ತಿರ ಪೆಟ್ರೋಲಿಂಗ ಮಾಡುತ್ತಾ ಬಂದೆವು. ಆಗ ಬೆಳಿಗ್ಗೆ 9.45 ಆಗಿತ್ತು. ಆ ಪಾನಶಾಪ್ ಹತ್ತಿರ 4 ಜನ ಸಿಗರೇಟ್ ಸೇದುತ್ತಿದ್ದರು. ನಾನು ಮತ್ತು ನನ್ನ ಸಿಬ್ಬಂದಿಯರಿಗೆ ಸಂಶಯ ಬಂದಿದ್ದರಿಂದ ಆ ವ್ಯಕ್ತಿಗಳ ಹತ್ತಿರ ಹೋಗುವಷ್ಟರಲ್ಲಿ ನಮ್ಮನ್ನು ನೋಡಿ ಸಿಗರೇಟ ತುಂಡನ್ನು ಗಟಾರಲ್ಲಿ ಎಸೆದರು. ಅಷ್ಟರೊಳಗಡೆ ನಾವು ಬಂದು ಅವರನ್ನು ಹಿಡಿದೆವು.

ಅವರ ಹೆಸರು ಕೇಳಲಾಗಿ ಗಣೇಶ ಬುರ್ಲಿ, ಕುಮಾರ ಹುಬ್ಬಳ್ಳಿ, ಭರತಗೌಡ ಪಾಟೀಲ, ರಾಘವೇಂದ್ರ ಕಮತರ ನವನಗರ ಅಂತಾ ಹೇಳಿದರು. ನಮಗೆ ಅವರು ಮಾದಕ ದ್ರವ್ಯ ಸೇವನೆ ಮಾಡಿದ್ದಾರೆ ಅಂತಾ ಸಂಶಯ ಬಂದಿತು. ಅವರನ್ನು ಮತ್ತು ಜಾಗೆಯನ್ನು ಪರಿಶೀಲನೆ ಮಾಡಿದೆವು. ಅವರ ಬಳಿ ಹಾಗೂ ಆ ಸ್ಥಳದಲ್ಲಿ ನಿಷೇದಿತ ಮಾದಕ ವಸ್ತು ಸಿಗಲಿಲ್ಲ. ನಮಗೆ ಅವರನ್ನು ನಿಷೇದಿತ ಮಾದಕ ವಸ್ತುವಾದ ಗಾಂಜಾ ಸೇವನೆ ಮಾಡಿದ್ದಾರೆ ಅಂತಾ ಕಂಡು ಬಂತು. ಅವರನ್ನು ಬೆಳಿಗ್ಗೆ 10 ಗಂಟೆಗೆ ವಶಕ್ಕೆ ತೆಗೆದುಕೊಂಡು ಠಾಣೆಗೆ ಬಂದು ಎಸ್ ಎಚ್ ಓ ಇವರ ಮುಂದೆ ಹಾಜರುಪಡಿಸಿದೆ. ಸದರಿ ಮಾದಕ ವಸ್ತು ಸೇವಿಸಿದ್ದಾರೊ ಇಲ್ಲವೊ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಎ ಎಸ್ ಐ ಎಸ್ ಎಮ್ ನಾಯ್ಕ, ಪಿಸಿ 3356 ಇವರ ಮುಖಾಂತರ ಕಿಮ್ಸ ಆಸ್ಪತ್ರೆಗೆ ವೈದ್ಯಕೀಯ ಪರಿಶೀಲನೆಗೆ ಕಳುಹಿಸಿದರು. ವೈದ್ಯರು ನಿಷೇದಿತ ಮಾದಕ ದ್ರವ್ಯ ಆರೋಪ ಸೇವಿಸಿದ್ದಾರೆ ಅಂತಾ ದಾಖಲಾತಿ ನೀಡಿದರು. ನಾನು ಆ ವೇಳೆಯಲ್ಲಿ ಸರ್ಕಾರದ ಪರ ಆರೋಪಿತರ ವಿರುದ್ದ ಎನ್ ಡಿ ಪಿ ಎಸ್ ಕಾಯ್ದೆ  ಕಲಂ 27(ಬಿ) ಅಡಿಯಲ್ಲಿ ಅಪರಾಧ ಮಾಡಿದ್ದಾರೆ ಅಂತಾ ದೂರು ನೀಡಿದೆ. ನಾನು ದಾಖಲಿಸಿದ ದೂರಿನ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.7 ಎಂದು, ನನ್ನ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಪುನಃ ಹೇಳಿಕೆಯನ್ನು ಈ ಪ್ರಕರಣದ ಬಗ್ಗೆ ನೀಡಿದ್ದೇನೆ.

2. ದಿಃ 29.07.2024 ರಂದು ನಮ್ಮ ಠಾಣೆಯ ಎ ಎಸ್ ಐ ರವರಾದ ಚಾಸಾಃ 19 ರವರ ಜೊತೆ ಘಟನಾ ಸ್ಥಳದ ಪಂಚನಾಮೆ ಮಾಡಲು ಹೋದೆ. ನಮ್ಮ ಜೊತೆ ಪಂಚರಾದ ಚಾಸಾಃ 2 ಮತ್ತು 3 ರವರು ಬಂದಿದ್ದರು. ಆ ದಿವಸ ಬೆಳಿಗ್ಗೆ 10.30 ರಿಂದ 11.15 ರವರಗೆ ಪಂಚನಾಮೆ ಮಾಡಲಾಗಿದೆ. ನನಗೆ ತೊರಿದ ನಿಪಿ.2 ರಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ನಿಪಿ.3 ಪೊಟೊದಲ್ಲಿ ನಾನು ಇದ್ದು ಅದನ್ನು ಘಟನಾ ಸ್ಥಳದಲ್ಲಿ ತೆಗೆಯಲಾಯಿತು. ಆರೋಪಿತರಿಗೆ ಗಾಂಜಾವನ್ನು ಎಲ್ಲಿಂದ ತೆಗೆದುಕೊಂಡು ಬಂದಿದಿರಿ ಅಂತಾ ವಿಚಾರಿಸಲಾಗಿ ಅವರು ಅರ್ಜುನ ವಡ್ಡರ ಇವರಿಂದ ಪಡೆದಿದ್ದೇನೆ ಅಂತಾ ಹೇಳಿದ. ಆ ಬಗ್ಗೆ ನಾನು ದಿಃ 20.08.2024 ರಂದು ಪುನಃ ಹೇಳಿಕೆ ಕೊಟ್ಟಿದ್ದೇನೆ. ಆ ಪುನಃ ಹೇಳಿಕೆಯಲ್ಲಿ ಘಟನೆಯ ಬಗ್ಗೆ ನಾನು ವಿವರವಾಗಿ ಹೇಳಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ನಂ.5 ಇವರನ್ನು ನೋಡಿ

ಗುರುತಿಸುತ್ತೇನೆ.

**ಆರೋಪಿತರ ಪರ ವಕೀಲರು ಪಾಟಿಸವಾಲಿಗೆ  ಸಮಯ ಕೋರಿದ್ದು ಸೂಕ್ತ ವೆಚ್ಚ ವಿಧಿಸಿ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.